ಸಂಪುಟ : 40 ಸಂಚಿಕೆ 181 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 27 ಜುಲೈ 2017 ಗುರುವಾರ POST REG NO . L-2/RNP- 364/TMR/2015-17 ಪುಟಗಳು :08 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com

ಬಿಹಾರದ ಮುಖ್ಯಮಂತ್ರಿ ಸ್ಥಾನಕ್ಕೆ ನಿತೀಶ್‌ಕುಮಾರ್ ರಾಜಿನಾಮೆ

ವಿವರ : ಪುಟ 08

ಶೀಘ್ರವೇ 200 ರೂ. ಮುಖಬೆಲೆಯ ನೋಟು ಚಲಾವಣೆ : ಆರ್‌ಬಿಐ

ಶ್ರೀಲಂಕಾ ವಿರುದ್ಧ ಶತಕ ಸಿಡಿಸಿ ದ್ವಿಶತಕ ವಂಚಿತರಾದ ಭಾರತದ ಶಿಖರ್‌ಧವನ್

ವಿವರ : ಪುಟ 08

₹55 Discount Per Gram
Gold 916 ₹ 2650/-
Silver ₹ 39800/-
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

ವಿದ್ಯಾರ್ಥಿಗಳ ಬಸ್ ಸಮಸ್ಯೆ ನಿವಾರಿಸಲು ಕ್ರಮ

ಪುಲುಮಾಚಿ ಗ್ರಾಮ ವಾಸ್ತವ್ಯದಲ್ಲಿ ಶಾಸಕ ಕೆ.ಎನ್.ರಾಜಣ್ಣ ಭರವಸೆ

ಮಧುಗಿರಿ

ತಾಲ್ಲೂಕಿನಲ್ಲಿ ನೂತನವಾಗಿ ಆರಂಭವಾಗಿರುವ ಸಾರಿಗೆ ಡಿಪೋದಲ್ಲಿ ಸುಮಾರು 20 ಬಸ್‌ಗಳು ಸಿಬ್ಬಂದಿ ವರ್ಗದ ಕೊರತೆಯಿಂದಾಗಿ ನಿಂತಿವೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದಾಗಿ ಕೂಡಲೆ ಸಿಬ್ಬಂದಿಗಳನ್ನು ನೇಮಿಸುವಂತೆ ಈಗಾಗಲೇ ಸಂಬಂಧಪಟ್ಟವರೊಂದಿಗೆ ಚರ್ಚಿಸಲಾಗಿದೆ ಹಾಗೂ ಐಡಿಹಳ್ಳಿ ಮಿಡಿಗೇಶಿ ಮಾರ್ಗವಾಗಿ ಮಧುಗಿರಿಗೆ ಬಸ್ ಸೌಕರ್ಯ ಕಲ್ಪಿಸಲಾಗುವುದು ಶಾಸಕ ಕೆ.ಎನ್.ರಾಜಣ್ಣ ತಿಳಿಸಿದರು.

ತಾಲ್ಲೂಕಿನ ಐಡಿಹಳ್ಳಿ ಹೋಬಳಿಯ ಪುಲಮಾಚಿ ಗ್ರಾಮದಲ್ಲಿ ಆಯೋಜಿಸಿದ್ದ ಸ್ಥಳೀಯ ಶಾಸಕರ ಗ್ರಾಮ ವಾಸ್ತವ್ಯದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗರಣಿ ಪಂಚಾಯತಿಯಲ್ಲಿ ನಮ್ಮ ಪಕ್ಷದವರು ಆಡಳಿತದ ಚುಕ್ಕಾಣಿ ಹಿಡಿದಿಲ್ಲ, ಅಭಿವೃದ್ದಿಯ ದೃಷ್ಟಿಯಿಂದ ಪಂಚಾಯತಿಯ ವ್ಯಾಪ್ತಿಯ ನಾನಾ ಕಾಮಗಾರಿಗಳಿಗಾಗಿ 12 ಕೋಟಿ ಅನುದಾನವನ್ನು ನೀಡಲಾಗಿದೆ. ಸುಮಾರು 90 ಮನೆ ಮಂಜೂರು ಮಾಡಲಾಗಿದೆ. ಹೊಸಕೋಟೆ, ಮಾದೇನಹಳ್ಳಿ ರಸ್ತೆ ತುಂಬಾ ಹದಗಟ್ಟಿದ್ದು ಶೀಘ್ರವೇ ಅಭಿವೃದ್ಧಿ ಪಡಿಸಲಾಗುವುದು. ಕಾಂಗ್ರೆಸ್ ಸರಕಾರ ಬಡವರ ಪರವಾಗಿದೆ, ಮುಂದಿನ ವರ್ಷ ಎಲ್ಲಾ ಸಮುದಾಯದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೂ ಉಚಿತ ಬಸ್‌ಪಾಸ್ ಸೌಲಭ್ಯ ಕಲ್ಪಿಸಲಾಗುವುದು. ಮುಂದಿನ ದಿನಗಳಲ್ಲಿ ದೊಡ್ಡೇರಿ ಹೋಬಳಿಯಲ್ಲಿ ಗ್ರಾಮ ವಾಸ್ತವ್ಯ ಮಾಡುವುದಾಗಿ ತಿಳಿಸಿದರು.

ಈ ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ಮನಮೋಹನ್‌ಸಿಂಗ್‌ರವರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಸುಮಾರು 73 ಸಾವಿರ ಕೋಟಿ ರೂ.ಸಾಲ ಮನ್ನಾ ಮಾಡಿದ್ದರು. ನಮ್ಮ

ಸಾಲ ಮನ್ನಾ ಮಾಡಲು ಕೇಂದ್ರಕ್ಕೆ ಒತ್ತಾಯ

ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಸಹಾಯಧನವನ್ನು 5 ರೂಗಳಿಗೆ ಏರಿಕೆ ಮಾಡಲಾಗಿದೆ. ಸುಮಾರು 1200 ಕೋಟಿ ರೂಗಳಷ್ಟು ಸಹಾಯ ಧನವನ್ನು ರಾಜ್ಯದ ರೈತರ ಪಡೆಯುತ್ತಿದ್ದಾರೆ. ದೇಶದ ದೊಡ್ಡ ದೊಡ್ಡ ಉದ್ದಿಮೆದಾರರಿಗೆ ಮಾತ್ರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಮನ್ನಾ ಮಾಡಲಾಗುತ್ತಿದೆ. ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯದ ರೈತರ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ಕೇಂದ್ರ ಸರಕಾರವನ್ನು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಸಹಾಯಧನವನ್ನು 5 ರೂಗಳಿಗೆ ಏರಿಕೆ ಮಾಡಲಾಗಿದೆ. ಸುಮಾರು 1200 ಕೋಟಿ ರೂಗಳಷ್ಟು ಸಹಾಯ ಧನವನ್ನು ರಾಜ್ಯದ ರೈತರ ಪಡೆಯುತ್ತಿದ್ದಾರೆ. ದೇಶದ ದೊಡ್ಡ ದೊಡ್ಡ ಉದ್ದಿಮೆದಾರರಿಗೆ ಮಾತ್ರ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಮನ್ನಾ ಮಾಡಲಾಗುತ್ತಿದೆ. ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯದ ರೈತರ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ಕೇಂದ್ರ ಸರಕಾರವನ್ನು ಈ ಸಂದರ್ಭದಲ್ಲಿ ಒತ್ತಾಯಿಸಿದರು. ಉಪವಿಭಾಗಾಧಿಕಾರಿ ಡಾ.ವೆಂಕಟೇಶಯ್ಯ, ತಾ.ಪಂ.ಅಧ್ಯಕ್ಷೆ ಇಂದಿರಾ ದೇನಾನಾಯ್ಕ, ಜಿಪಂ ಸದಸ್ಯ ಕೆಂಚ ಮಾರಯ್ಯ, ಜಿ.ಜೆ.ರಾಜಣ್ಣ, ಮಂಜುಳಾ ಆದಿನಾರಾಯಣ ರೆಡ್ಡಿ, ಎಪಿಎಂಸಿ ಅಧ್ಯಕ್ಷ ಪಿ.ಟಿ.ಗೋವಿಂದಯ್ಯ, ಗರಣಿ ತಾಪಂ ಸದಸ್ಯರಾದ ಕೆ.ಎ.ರಾಜು, ಗ್ರಾಪಂ ಸದಸ್ಯರಾದ ಗೋವಿಂದಪ್ಪ, ಮೂರ್ತಿ, ನಾರಾಯಣಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್ ಮಲ್ಲಿಕಾರ್ಜುನಪ್ಪ, ಮುಖಂಡರಾದ ಶನಿವಾರಂ ರೆಡ್ಡಿ, ಶ್ರೀನಿವಾಸ ರೆಡ್ಡಿ, ಗರಣಿ ಗಿರೀಶ್, ವಕೀಲ ನರಸಿಂಹಮೂರ್ತಿ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.

‘ವೀರಶೈವಲಿಂಗಾಯಿತ’ ಪ್ರತ್ಯೇಕ ಧರ್ಮವೆಂದು ಘೋಷಿಸಲು ಅರ್ಹ

ತುಮಕೂರು

ವೀರಶೈವ ಲಿಂಗಾಯಿತ ಪ್ರತ್ಯೇಕ ಧರ್ಮ ಪಡೆಯಲು ನಡೆದಿರುವ ಹೋರಾಟದ ಬಗ್ಗೆ ಪ್ರತಿಕ್ರಿಯಿಸಿರುವ ತುಮಕೂರು ನಗರ ವೀರಶೈವ ಸಮಾಜ ಸೇವಾ ಸಮಿತಿಯು ಪ್ರತ್ಯೇಕ ಧರ್ಮವೆಂದು ಘೋಷಿಸಲು ಅರ್ಹವಾಗಿದೆ ಎಂದು ತಿಳಿಸಿದೆ.

ಈ ಸಂಬಂಧ ಬುಧವಾರ ಸಮಾಜದ ಅಧ್ಯಕ್ಷ ಟಿ.ಬಿ.ಶೇಖರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು, ಆ ಸಂದರ್ಭದಲ್ಲಿ ಮಾತನಾಡಿದ ಟಿ.ಬಿ.ಶೇಖರ್ ಅವರು ವೀರಶೈವ ಎನ್ನುವುದು ಸಂಸ್ಕೃತ ಪದ. ಲಿಂಗಾಯಿತ ಎನ್ನುವುದು ಕನ್ನಡ ಪದ. ಸಿದ್ಧಾಂತ ಶಿಖಾಮಣಿಯಲ್ಲಿ ಬರುವ ಶ್ಲೋಕಗಳು ಸಂಸ್ಕೃತದಲ್ಲಿದ್ದು, ವಚನ ಸಾಹಿತ್ಯ ಕನ್ನಡದಲ್ಲಿದ್ದು, ಎರಡರಲ್ಲೂ ಸಹ ಹೋಲಿಕೆ ಇರುತ್ತದೆ ಎಂದಿದ್ದಾರೆ. ವೀರಶೈವ ಲಿಂಗಾಯಿತ ಆಚರಣೆಯಲ್ಲಿ ಸಾಮಿಪ್ಯವಿದ್ದು, ಎರಡೂ ಒಂದೇ ಎನ್ನುವುದು ವ್ಯಕ್ತವಾಗುತ್ತದೆ.

ಹಿಂದೂ ಧರ್ಮದಲ್ಲಿ ಕಾಣುವಂತಹ ಚಾತುರ್ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಣಗಳಿಗೆ ಮಿಗಿಲಾಗಿ ವೀರಶೈವ ಧರ್ಮವು ಸನಾತನ ಧರ್ಮವಾಗಿದ್ದು, ಆಚಾರ-ವಿಚಾರಗಳಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿ ವಿಭಿನ್ನವಾಗಿದೆ. ಹೀಗಾಗಿ ವೀರಶೈವ ಲಿಂಗಾಯಿತ ಎನ್ನುವ ಪ್ರತ್ಯೇಕ ಧರ್ಮವೆಂದು ಘೋಷಿಸಲು ಅರ್ಹವಾಗಿದೆ ಎಂಬ ನಿರ್ಣಯವನ್ನು ಕೈಗೊಂಡು ವೀರಶೈವ ಲಿಂಗಾಯಿತ ಧರ್ಮ ಎರಡೂ ಒಂದೇ ಎಂಬ ಸಹಮತ ಸೂಚಿಸಿದೆ. ಈ ವಿಚಾರವಾಗಿ ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು ತೆಗೆದುಕೊಂಡಿರುವ ನಿಲುವಿಗೆ ತುಮಕೂರು ನಗರ ವೀರಶೈವ ಸಮಾಜ ಸೇವಾ ಸಮಿತಿ ಸಂಪೂರ್ಣ ಸಹಮತ ವ್ಯಕ್ತಪಡಿಸಿದೆ ಎಂದು ಟಿ.ಬಿ.ಶೇಖರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದ ಟೌನ್‌ಹಾಲ್ ವೃತ್ತದಲ್ಲಿ ಭಗತ್ ಕ್ರಾಂತಿ ಸೇನೆ ವತಿಯಿಂದ ಕಾರ್ಗಿಲ್ ವಿಜಯ ದಿವಸ್ ಆಚರಿಸ ಲಾಯಿತು. ಕಾರ್ಯಕ್ರಮದಲ್ಲಿ ಸೈನಿಕರಾದ ಮಂಜುನಾಥ್,ಮಾಜಿ ಸೈನಿಕರಾದ ಮುದ್ದಲಿಂಗಣ್ಣ, ನಂಜುಂಡಯ್ಯ,ಉದ್ಯಮಿ ಎನ್.ಎಸ್. ಜಯಕುಮಾರ್, ಕನ್ನಡ ಸೇನೆ ಅಧ್ಯಕ್ಷ ಧನಿಯಕುಮಾರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಜ್ಯೋತಿಗಣೇಶ್, ಭಗತ್ ಕ್ರಾಂತಿ ಸೇನೆಯ ಆರಾಧ್ಯ ಮಂಚಲದೊರೆ, ಚೇತನ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಇದೇ ವೇಳೆ ಕಾರ್ಗಿಲ್ ವಿಜಯದಿವಸ್‌ನ ಅಂಗವಾಗಿ ಸಸಿಗಳನ್ನು ವಿತರಿಸಲಾಯಿತು.

ಕಾಂಗ್ರೆಸ್ ಸದಸ್ಯರಿಂದ ಲೋಕಸಭೆಯಲ್ಲಿ ಪ್ರತಿಭಟನೆ

ನವದೆಹಲಿ

ಕೇಂದ್ರ ಸರ್ಕಾರ ಯಾವುದೇ ವಿಚಾರದ ಬಗ್ಗೆ ಮಾತನಾಡಲು ತಮಗೆ ಅವಕಾಶ ಕೊಡದೆ, ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ ಎಂದು, ಕಾಂಗ್ರೆಸ್ ಸದಸ್ಯರು ಲೋಕಸಭೆಯಲ್ಲಿ ಪ್ರತಿಭಟಿಸಿದರು.

ಬೆಳಿಗ್ಗೆ ಸದನದಲ್ಲಿ ಪ್ರಶ್ನೋತ್ತರ ಕಲಾಪ ಆರಂಭವಾಗುತ್ತಿದ್ದಂತೆ ಮಾತಿಗಿಳಿದ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಗೋ ಸರಂಕ್ಷಣೆ ಹೆಸರಿನಲ್ಲಿ ನಡೆಯುತ್ತಿರುವ ದಾಂಧಲೆಗಳನ್ನು ಪ್ರಸ್ತಾಪಿಸಿದರು. ಆದರೆ ಸಭಾಧ್ಯಕ್ಷೆ ಸುಮಿತ್ರಾ ಮಹಾಜನ್ ಚರ್ಚೆಗೆ ಅವಕಾಶ ನಿರಾಕರಿಸಿದರು.

ಕೂಡಲೇ ಕಾಂಗ್ರೆಸ್ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರಶ್ನೋತ್ತರ ಅವಧಿಯ ನಂತರವೂ ಪ್ರತಿಭಟನೆ ಮುಂದುವರಿಸಿದ ಕಾಂಗ್ರೆಸ್ ಸದಸ್ಯರು, ರೈತರ ಸಮಸ್ಯೆ ಸೇರಿದಂತೆ ಹಲವು ವಿಷಯಗಳನ್ನು ಚರ್ಚಿಸಲು ಕೂಡಲೆ ಅವಕಾಶ ಕೊಡಬೇಕು ಎಂದು ಪಟ್ಟು ಹಿಡಿದರು. ಗದ್ದಲ ಮುಂದುವರಿದ ಹಿನ್ನೆಲೆಯಲ್ಲಿ, ಸಭಾಧ್ಯಕ್ಷರು ಕಲಾಪವನ್ನು ಇಂದಿಗೆ ಮುಂದೂಡಿದರು.

ಅಂಕು ಡೊಂಕು

ಚನ್ನೇನಹಳ್ಳಿ ಶಿವರಾಜ್

ಅಭ್ಯಾಸ ಬಲ



ಸಾರ್ ಮಳೆ ಇಲ್ಲದಿದ್ದರೂ ನೀವು ಆಫೀಸಿನಲ್ಲಿ ಕೈ ಚಾಚುವ ಚಾಳಿ ಬಿಟ್ಟಿಲ್ಲ ಸಾರ್.

ಐಸಿಸಿ ಸಭೆ ಕರೆಯಲು ಮನವಿ

ತುಮಕೂರು

ಜಿಲ್ಲೆಗೆ ಕುಡಿಯುವ ನೀರು ಸರಬರಾಜು ಮಾಡುವ ಹೇಮಾವತಿ ಜಲಾಶಯದಲ್ಲಿ ಪ್ರಸ್ತುತ ಡೆಡ್‌ಸ್ಟೋರೇಜ್ ಹೊರತು ಪಡಿಸಿ 10.467 ಟಿ.ಎಂ.ಸಿ ನೀರಿದ್ದು,ಕೂಡಲೇ ಐಸಿಸಿ ಸಭೆ ನಡೆಸಿ ನೀರು ಹರಿಸುವಂತೆ ತುಮಕೂರು ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಸಚಿವರುಗಳನ್ನು ಒತ್ತಾಯಿಸಲಾಗುವುದು ಎಂದು ತುಮಕೂರು ನಗರ ಶಾಸಕ ಡಾ.ರಫೀಕ್ ಅಹಮದ್ ತಿಳಿಸಿದ್ದಾರೆ.

ಕುಡಿಯುವ ನೀರಿನ ವಿಚಾರವಾಗಿ ತಮ್ಮ ಕಚೇರಿಯಲ್ಲಿ ಹೇಮಾವತಿ ನಾಲಾ ವಲಯದ ಅಧಿಕಾರಿಗಳು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಪಾಲಿಕೆಯ ಅಧಿಕಾರಿಗಳ ಸಭೆ ನಡೆಸಿ ನಗರದ ಕುಡಿಯುವ ನೀರಿನ ಬೇಡಿಕೆ ಮತ್ತು ಸರಬರಾಜು ಕುರಿತಂತೆ ಮಾಹಿತಿ ಪಡೆದ ನಂತರ ಮಾತನಾಡಿದ ಅವರು,ಕಳೆದ ವಾರದ ಹೇಮಾವತಿ ಜಲಾಶಯದ ಅಚ್ಚುಕಟ್ಟು ಪ್ರದೇಶ ದಲ್ಲಿ ಬಿದ್ದ ಉತ್ತಮ ಮಳೆಯಿಂದ ಇದುವರೆಗೂ 14.84 ಟಿ.ಎಂ.ಸಿ. ನೀರು ಸಂಗ್ರಹವಾಗಿದ್ದು, ಇದರಲ್ಲಿ ಡೆಡ್ ಸ್ಟೋರೇಜ್ 4.37 ಟಿ.ಎಂ. ಹೊರತು ಪಡಿಸಿದರೆ, 10.467 ಟಿ.ಎಂ.ಸಿ ನೀರು ನಾಲೆಗಳಿಗೆ ಹರಿಸಲು ಲಭ್ಯವಿದೆ. ಆದ್ದರಿಂದ ಸದರಿ ನೀರನ್ನು ತುಮಕೂರು ಜಿಲ್ಲೆಗೆ ಕುಡಿಯಲು ಹರಿಸಲು ಶೀಘ್ರವೇ ಐಸಿಸಿ ಸಭೆ ಕರೆದು ಚರ್ಚೆ ನಡೆಸಿ ನೀರು ಹರಿಸಬೇಕೆಂದು ಇಂದು ನಡೆಯುವ ಸಚಿವ ಸಂಪುಟದ ಸಭೆಯ ವೇಳೆ ಎರ್ವರೂ ಮಂತ್ರಿಗಳನ್ನು ಒತ್ತಾಯಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ತುಮಕೂರು ಜಿಲ್ಲೆಗೆ ಕುಡಿಯಲು 5.80 ಟಿ.ಎಂ.ಸಿ ನೀರಿನ ಅಗತ್ಯವಿದೆ.ಇದರಲ್ಲಿ ತುಮಕೂರು ನಗರಕ್ಕೆ .1.135 ಟಿ.ಎಂ.ಸಿ ಅಗತ್ಯವಿದ್ದು,ಬುಗುಡನಹಳ್ಳಿ ಕೆರೆ.8.4 ಟಿ.ಎಂ.ಸಿ ನೀರು ಸಂಗ್ರಹ ಮಾಡುವ ಸಾಮರ್ಥ್ಯವನ್ನು ಹೊಂದಿದ್ದು,ಒಂದೇ ಕಂತಿನಲ್ಲಿ ಮೊದಲ ಭಾಗವಾಗಿ ಬುಡುಗನಹಳ್ಳಿ ಕೆರೆಯನ್ನು ತುಂಬಿಸುವಂತೆ ಸಚಿವರಲ್ಲಿ ಮನವಿ ಮಾಡುವುದಾಗಿ ತಿಳಿಸಿದ ಶಾಸಕರು,

»» 7ನೇ ಪುಟಕ್ಕೆ

ಆಧುನಿಕತೆಯಲ್ಲಿ ಧಾರ್ಮಿಕ ಮೌಲ್ಯಗಳು ಕುಸಿಯುತ್ತಿವೆ

ಮಾವಿನಹಳ್ಳಿಯಲ್ಲಿ ನಡೆದ ಧಾರ್ಮಿಕ ಸಮಾರಂಭದಲ್ಲಿ ಡಾ|| ನಿರ್ಮಲಾನಂದನಾಥ ಸ್ವಾಮೀಜಿ

ಗುಬ್ಬಿ

ಆಧುನಿಕತೆ ಬೆಳೆದಂತೆ ನಮ್ಮ ಸನಾತನ ಧಾರ್ಮಿಕ ಮೌಲ್ಯಗಳು ಕುಸಿಯುತ್ತಿರುವ ಸಂದರ್ಭದಲ್ಲಿ ಇಂದಿನ ಯುವ ಜನಾಂಗ ಗುಣಮಟ್ಟದ ಶಿಕ್ಷಣ ಪಡೆಯುವ ಮೂಲಕ ಮೌಲ್ಯಾಧಾರಿತ ಸಮಾಜ ನಿರ್ಮಾಣ ಮಾಡುವತ್ತ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ ಎಂದು ಶ್ರೀಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಡಾ:ನಿರ್ಮಲಾನಂದನಾಥಸ್ವಾಮೀಜಿ ಕರೆನೀಡಿದರು.

ತಾಲ್ಲೂಕಿನ ಸಿ.ಎಸ್.ಪುರ ಹೋಬಳಿ ಮಾವಿನಹಳ್ಳಿಯಲ್ಲಿ ಶ್ರೀಗುಡ್ಡದರಂಗನಾಥಸ್ವಾಮಿ ನೂತನ ದೇವಾಲಯ, ಗರುಡಗಂಭ, ನೂತನ ಚರಬಿಂಬ ಶ್ರೀದೇವಿ ಭೂದೇವಿ ಸಮೇತ ರಂಗನಾಥಸ್ವಾಮಿ ಹಾಗೂ ಪರಿವಾರ ದೇವತೆಗಳ ದೇವಾಲಯದ ಜೀರ್ಣೋದ್ದಾರ ಕಾರ್ಯಕ್ರಮದ ಅಂಗವಾಗಿ ನಡೆದ ಧಾರ್ಮಿಕ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಮಾಜಿಕ ಮೌಲ್ಯಗಳನ್ನು ಉತ್ತಮಪಡಿಸುವುದರ ಜೊತೆಗೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಗಳನ್ನು ಶಾಶ್ವತವಾಗಿ ಉಳಿಸಿ ಬೆಳೆಸುವಂತಹ ಮಹತ್ವದ ಕಾರ್ಯ ಆದಾಗ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ತಿಳಿಸಿದರು.

ಪ್ರಸ್ತುತ ಸಂದರ್ಭದಲ್ಲಿ ವಿದ್ಯಾವಂತ ಯುವಕರು ಆಧುನಿಕ ತಂತ್ರಜ್ಞಾನ ಹಾಗೂ ವಿಜ್ಞಾನವನ್ನು ಬಳಸಿಕೊಳ್ಳುವ ಮೂಲಕ ನಮ್ಮ ಬದುಕಿನ ಹಿಂದೆ ಇರುವ ಪರಮಾತ್ಮನ ಶಕ್ತಿಯನ್ನು ಅರಿಯಬೇಕು. ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಸಾಮಾಜಿಕ ಬದುಕಿನಲ್ಲಿ ಅಳವಡಿಸಿಕೊಳ್ಳುವತ್ತ ವಿದ್ಯಾವಂತ ಯುವಕರು ಚಿಂತನೆ ನಡೆಸಬೇಕಿದೆ. ಗ್ರಾಮೀಣ ಶಾಲೆಗಳ ಸರ್ವತೋಮುಖ ಪ್ರಗತಿಯ ಜೊತೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಸಂಸ್ಕಾರಗಳನ್ನು ಕಲಿಸುವತ್ತ ಶಿಕ್ಷಣ ಸಂಸ್ಥೆಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ ಎಂದ ಅವರು, ಶಿಕ್ಷಣದ ಜೊತೆಗೆ ಕರೆದುಕೊಂಡು ಹೋಗುತ್ತಿದ್ದ ಪ್ರವಾಸ ಹಾಗೂ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಯ ಬದುಕನ್ನು ಹಸನಾಗಿಸುತ್ತದೆ. ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಲಿತ ನಾವುಗಳು, ಆಂಗ್ಲಮಾಧ್ಯಮದಲ್ಲಿ ಕಲಿಯುತ್ತಿದ್ದ ಶ್ರೀಮಂತರ ಮಕ್ಕಳನ್ನು ನೋಡಿ ಹೆಚ್ಚು ಕಲಿತೆವು. ಪ್ರತಿಯೊಂದು ಜಾತಿ, ಧರ್ಮದ ಮಕ್ಕಳಿಗೂ ಶ್ರೀಆದಿಚುಂನಗಿರಿಮಠ ನೀಡುವ ಶಿಕ್ಷಣ ದಾರಿದೀಪವಾಗಿದೆ ಎಂದರು.

ಆಧುನಿಕತೆಯ ಸೋಗಿನಲ್ಲಿ ಹೋಗುತ್ತಿರುವ ಜನಮಾನಸಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ದಿಕ್ಕು ತಪ್ಪಿಸುತ್ತದೆ ಎನ್ನುವುದು ತಪ್ಪು ಅಭಿಪ್ರಾಯ ಎಂದ ಅವರು, ಇತ್ತೀಚಿನ ದಿನಗಳಲ್ಲಿ ನಮ್ಮ ಅಮೂಲ್ಯವಾದ ಪರಿಸರ ವಿನಾಶದಂಚಿಗೆ ತಲುಪಿದ್ದು ಪ್ರತಿಯೊಬ್ಬರೂ ಗಿಡ ಮರಗಳನ್ನು ನೆಡುವ ಮೂಲಕ ಅಮೂಲ್ಯವಾದ ಪರಿಸರವನ್ನು ಸಂರಕ್ಷಿಸುವತ್ತ ಪ್ರಾಮಾಣಿಕ ಚಿಂತನೆ ನಡೆಸಬೇಕಿದೆ. ಪರಿಸರ ಸಂರಕ್ಷಣೆಯಿಂದ ಮಾತ್ರ ಉತ್ತಮ ಮಳೆ ಬೆಳೆ ಪಡೆಯಲು ಸಾಧ್ಯವಾಗುತ್ತದೆ. ಇಂದಿನ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಪರಿಸರ ಜಾಗೃತಿ ಮೂಡಿಸುವತ್ತ ಶಿಕ್ಷಣ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕಿದೆ ನಮ್ಮ

»» 5ನೇ ಪುಟಕ್ಕೆ

ಪಾವಗಡ: ಮಳೆ ಇಲ್ಲದೆ ಸಂಕಷ್ಟದಲ್ಲಿ ರೈತರ ಬದುಕು

◆ **ಹೆಚ್.ರಾಮಾಂಜಿನಪ್ಪ**
ಪಾವಗಡ

ಪಾವಗಡ ತಾಲ್ಲೂಕಿನಲ್ಲಿ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕಲ್ಪಿಸುವುದಾಗಿ ನಾಗಲಮಡಿಕೆ ಹೋಬಳಿಯಲ್ಲಿ ಸೋಲಾರ್‌ಪಾರ್ಕ್ ನಿರ್ಮಾಣ ಮಾಡಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ತಾಲ್ಲೂಕಿನ ನಿರುದ್ಯೋಗಿ ಯುವಕರು, ಕೂಲಿ ಕಾರ್ಮಿಕರು, ರೈತಾಪಿ ವರ್ಗದವರು ಉದ್ಯೋಗಕ್ಕಾಗಿ ಪ್ರಮುಖ ಪಟ್ಟಣಗಳಿಗೆ ಸುಮಾರು 50 ಸಾವಿರಕ್ಕಿಂತ ಹೆಚ್ಚು ಜನ ವಲಸೆ ಹೋಗಿದ್ದು, ಈ ವರ್ಷವೂ ಮಳೆ ಅಭಾವ ಕಾಣಿಸಿಕೊಂಡಿದ್ದು, ಯಾವುದೇ ಉದ್ಯೋಗವಿಲ್ಲದ ಕಾರಣ ವಲಸೆ ಹೋಗುವ ಸೂಚನೆಗಳು ಕಂಡು ಬಂದಿವೆ.

ತಾಲ್ಲೂಕಿನಲ್ಲಿ ಸತತವಾಗಿ 15 ವರ್ಷಗಳಿಂದ ಅತಿವೃಷ್ಠಿ ಅನಾವೃಷ್ಟಿಯಿಂದಲೋ ಒಂದಿಲ್ಲೊಂದು ಕಾರಣಕ್ಕೆ ಪಾವಗಡ ರೈತರಿಗೆ ಮಳೆ ಬೆಳೆಯಿಲ್ಲದೆ ಕೃಷಿಯಿಂದ ನಶಿಸಿ ಹೋಗುತ್ತಿದ್ದಾರೆ ಎಂದು ರೈತರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಾವಗಡ ಭೌಗೋಳಿಕ ವಿಸ್ತೀರ್ಣ 135249, ನೀರಾವರಿ 11494, ಖುಷ್ಕಿ 81121 ಹೆಕ್ಟೇರ್ ಇದ್ದು, 2017-18 ನೇ ಸಾಲಿನಲ್ಲಿ ಕಸಬಾ ಹೋಬಳಿಯಲ್ಲಿ ನೀರಾವರಿ 284, ಖುಷ್ಕಿಯಲ್ಲಿ 6467 ಹೆಕ್ಟೇರ್‌ನಲ್ಲಿ ಬೆಳೆ ಇಟ್ಟಿದ್ದು, ವೈ.ಎನ್. ಹೊಸಕೋಟೆ ಹೋಬಳಿಯಲ್ಲಿ ನೀರಾವರಿ 1673, ಖುಷ್ಕಿಯಲ್ಲಿ 14338 ಹೆಕ್ಟೇರ್‌ನಲ್ಲಿ ಬೆಳೆಯಿಟ್ಟಿದ್ದು, ನಾಗಲಮಡಿಕೆ ಹೋಬಳಿಯಲ್ಲಿ ನೀರಾವರಿಯಲ್ಲಿ 311, ಖುಷ್ಕಿಯಲ್ಲಿ 10116 ಹೆಕ್ಟೇರ್‌ನಲ್ಲಿ ಬೆಳೆಯಿಟ್ಟಿದ್ದು, ನಿಡಗಲ್ ಹೋಬಳಿಯಲ್ಲಿ ನೀರಾವರಿಯಲ್ಲಿ 3069, ಖುಷ್ಕಿ ಜಮೀನಿನಲ್ಲಿ 7873 ಹೆಕ್ಟೇರ್‌ನಲ್ಲಿ ಬೆಳೆಯಿಟ್ಟಿದ್ದು, ಅತಿ ಕಡಿಮೆ ಬೆಳೆ ಇಟ್ಟಿರುವುದರಲ್ಲಿ ಕಸಬಾ ಹೋಬಳಿ ಆಗಿದ್ದು, ತಾಲ್ಲೂಕಿನಲ್ಲಿ ನೀರಾವರಿ ಜಮೀನಿನಲ್ಲಿ 5337, ಖುಷ್ಕಿ ಜಮೀನಿನಲ್ಲಿ 38794 ಹೆಕ್ಟೇರ್‌ನಲ್ಲಿ ಬೆಳೆಯಿಟ್ಟಿದ್ದು, ಒಟ್ಟು 44131 ಹೆಕ್ಟೇರ್‌ನಲ್ಲಿ ಬಿತ್ತನೆ ಆಗಿದೆ ಎಂದು ಕೃಷಿ ಮೂಲಗಳಿಂದ ಮಾಹಿತಿ ತಿಳಿದು ಬಂದಿದೆ.

2016-17 ನೇ ಸಾಲಿನಲ್ಲಿ ಶೇಂಗಾ 40148, ಹೆಕ್ಟೇರ್‌ನಲ್ಲಿ ತೊಗರಿ 3018 ಹೆಕ್ಟೇರ್ ನಲ್ಲಿ ಬಿತ್ತನೆ ಆಗಿತ್ತು, 2017-18 ನೇ ಸಾಲಿನಲ್ಲಿ ಶೇಂಗಾ 17364, ತೊಗರಿ 1632 ಹೆಕ್ಟೇರ್‌ನಲ್ಲಿ ಇದುವರೆಗೂ ಬಿತ್ತನೆ ಮಾಡಿದ್ದು, ಈ ಹಿಂದೆ ಕೃಷಿ ಚಟುವಟಿಕೆಗಳಿಗಿಂತ ಅತಿ ಕಡಿಮೆ ಬಿತ್ತನೆ ಆಗಿದೆ ಎಂದು ಕೃಷಿ ಅಧಿಕಾರಿಗಳು ತಿಳಿಸಿದ್ದಾರೆ.

ತಾಲ್ಲೂಕಿನಲ್ಲಿ ಬಿತ್ತನೆ ಬೀಜ ಮಾರಾಟ ಎನ್‌ಜಿಓಗಳಿಂದ ಶೇಂಗಾ 15350 ಕ್ವಿಂಟಾಲ್, ತೊಗರಿ 102 ಕ್ವಿಂಟಾಲ್ ಮಾತ್ರ ಮಾರಾಟ ಮಾಡಿದ್ದು, ಯಾವೊಬ್ಬ ರೈತನು ಧೈರ್ಯದಿಂದ ಬಿತ್ತನೆ ಬೀಜ ಖರೀದಿ ಮಾಡುತ್ತಿಲ್ಲ,ಪಾವಗಡ ತಾಲ್ಲೂಕಿನಲ್ಲಿ ಒಂದಾನೊಂದು ಕಾಲದಲ್ಲಿ ಬಿತ್ತನೆ ಬೀಜಕ್ಕಾಗಿ ಕೃಷಿ ಮಾರುಕಟ್ಟೆ ಆವರಣದಲ್ಲಿ ರಾತ್ರಿ ಹಗಲು ಎನ್ನದೆ ಕಾದು ಕುಳಿತು ಬಿತ್ತನೆ ಬೀಜಕ್ಕೆ ಪರದಾಡುತ್ತಿದ್ದರು.

ತಾಲ್ಲೂಕಿನಲ್ಲಿ ಶೇಕಡ 25 ರಷ್ಟು ರೈತರು ಬಿತ್ತನೆ ಮಾಡಿದ್ದು, ಇನ್ನು ಇತ್ತೀಚೆಗೆ ಬಂದ ಮಳೆಯಿಂದ ಅಲ್ಪ ಸ್ವಲ್ಪ ರೈತರು ಬಿತ್ತನೆ ಮಾಡುತ್ತಿದ್ದಾರೆ. ಈ ಹಿಂದೆ

»» 5ನೇ ಪುಟಕ್ಕೆ

ಮನೆ ಮಹಡಿಯ ಬಾಗಿಲು ಬೀಗ ಮುರಿದು ಆಭರಣ ಕಳವು

ತುಮಕೂರು

ಮನೆಯ ಮಹಡಿ ಮೇಲಿನ ಬಾಗಿಲನ್ನು ಒಡೆದು ಒಳಕ್ಕೆ ಪ್ರವೇಶಿಸಿರುವ ಕಳ್ಳರು 4 ಲಕ್ಷ 50 ಸಾವಿರ ರೂ. ಮೌಲ್ಯದ ಚಿನ್ನಾಭರಣಗಳನ್ನು ಅಪಹರಿಸಿರುವ ಘಟನೆ ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಯ ಕೃಷ್ಣಾಚಾರ್ ಎಂಬುವವರ ಮನೆಯಲ್ಲಿ ಜುಲೈ 24ರಂದು ರಾತ್ರಿ ನಡೆದಿದೆ.

ಚಿನ್ನದ ಬಳೆ, ಚಿನ್ನದ ಹರಳಿನ ಪದಕ, ಕೆಂಪು ಹರಳಿನ ನೆಕ್ಲೆಸ್, ಹವಳದ ನೆಕ್ಲೆಸ್, ಮುತ್ತಿನ ಓಲೆ ಮತ್ತು ಜುಮುಕಿ, ಕರಿಮಣಿಸರ, ಉಂಗುರಗಳು, ಹರಳಿನ ಬ್ರೋಚ್ ಇತ್ಯಾದಿ ಕಳುವಾಗಿವೆಯೆಂದು ಜುಲೈ 25 ರಂದು ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ. ಈ ಬಗ್ಗೆ ಪಟ್ಟನಾಯಕನಹಳ್ಳಿ ಠಾಣೆ ಪೊಲೀಸರು ಐ.ಪಿ.ಸಿ. ಕಲಂ 457, 380 ರ ಪ್ರಕಾರ ಮೊಕದ್ದಮೆ ದಾಖಲಿಸಿದ್ದಾರೆ.

Mazumdar Shaw Cancer Center
Unit of Narayana Health

NH Health City
Unit of Narayana Health

ಮಹಿಳಾ ಆರೋಗ್ಯ ತಪಾಸಣೆ ಶಿಬಿರದ
ದಿನಾಂಕ : 28-07-2017 | ಸಮಯ : ಬೆ. 10:00 ರಿಂದ ಮ. 2:00

ಡಾ. ಸುಚಿತ್ರಾ
ಪ್ರಸೂತಿಯ ಮತ್ತು ಸ್ತ್ರೀ ರೋಗಶಾಸ್ತ್ರ ವಿಭಾಗ, ನಾರಾಯಣ ಹೆಲ್ತ್ ಸಿಟಿ, ಬೆಂಗಳೂರು

ನಿಮ್ಮಲ್ಲಿ ಇಂತಹ ರೋಗಲಕ್ಷಣಗಳಿಂದ ಬಳಲುತ್ತಿದ್ದೀರಾ?
- ಸ್ತನದಲ್ಲಿ ಗಡ್ಡೆ ಕಂಡುಬರುವುದು ಅಥವಾ ಅಸಹಜ ಗಟ್ಟಿತನ
- ಚರ್ಮದ ಊತ, ಗುಳಿ ಬೀಳುವುದು, ಕೆಂಪಾಗುವುದು ಅಥವಾ ಜೋಮು ಬರುವುದು
- ಮೊಲೆತೊಟ್ಟಿನ ಆಕಾರ ಅಥವಾ ಸ್ವರೂಪದಲ್ಲಿ ಬದಲಾವಣೆ ಮತ್ತು ಮೊಲೆಯ ಸೋರುವಿಕೆ
- ಶ್ರೋಣಿಯ ಪ್ರದೇಶದಲ್ಲಿ ನೋವು
- ಪೋಸ್ಟ್ ಸುರತದ ರಕ್ತಸ್ರಾವ, ಸಿಎ ಗರ್ಭಕಂಠ ಆಗಿರಬಹುದು
- ಋತುಬಂಧಕ್ಕೊಳಗಾದ ರಕ್ತಸ್ರಾವ, ಎಂಡೊಮೆಟ್ರಿಯಂನಲ್ಲಿ ಆಗಿರಬಹುದು
- ಮುಟ್ಟು ನಿಲ್ಲುತ್ತಿರುವ ವಯಸ್ಸಿನಲ್ಲಿ ಜಿಐ ಅಡಚಣೆ

ಶಿಬಿರದಲ್ಲಿ ಈ ಕೆಳಗಿನ ತಪಾಸಣೆ ಒಳಗೊಂಡಿರುತ್ತದೆ: ಸ್ತ್ರೀರೋಗ ಕ್ಯಾನ್ಸರ್ ತಜ್ಞರಿಂದ ತಪಾಸಣೆ

ಸ್ಥಳ : ಟಿ ಎಚ್ ಎಸ್ ಆಸ್ಪತ್ರೆ,
ಮಾರುತಿ ಥಿಯೇಟರ್ ಹತ್ತಿರ, ಬಿಎಚ್ ರಸ್ತೆ,
ತುಮಕೂರು

ಸಂಪರ್ಕಿಸಿ:
+91 99009 00080
+91 99457 50954
+91 95380 98776

ನಾರಾಯಣ ಹೆಲ್ತ್ ಸಿಟಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹೊಸೂರು ರಸ್ತೆ, ಬೆಂಗಳೂರು